O.S. ನಂಬರಃ 2/2022

ಪಿ. ಡಬ್ಲ್ಯೂಃ 1

ದಿಃ 12-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಆರ್.ಎನ್. ವಕೀಲರಿಂದಃ</u>

ನಿಪಿ-11 ಮತ್ತು 12 ರಲ್ಲಿ ನಮ್ಮ ಹಾಗೂ ಪ್ರತಿವಾದಿಯರ ಮನೆಗಳು ಎಲ್ಲಿವೆ ಎಂದು ತೋರಿಸಿಲ್ಲ ಎಂದರೆ ಸರಿ. ನಾನು ವಾಸಿಸುವ ಮನೆ ನನ್ನ ಅಜ್ಜನ ಕಾಲದಿಂದಲೂ ಇದೆ. ಪ್ರತಿವಾದಿಯರು ಅಂದಾಜು 10 ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ್ತವ್ಯವಿದ್ದಾರೆ. ಪ್ರತಿವಾದಿಯರು 10 ವರ್ಷಗಳಿಂದ ವಾಸ್ತವ್ಯವಿದ್ದಾರೆಂದು ತೋರಿಸಲು ಕಾಗದಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ನನಗೆ ಹೊಡೆಬಡೆ ಮಾಡಿ ವಾಸ್ತವ್ಯ ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ಈ ಕುರಿತು ವಕೀಲರಿಗೆ ಮಾಹಿತಿ ನೀಡಿದ್ದೀರಾ ಎಂದರೆ ನೀಡಿಲ್ಲ ಎಂದು ಹೇಳುತ್ತಾರೆ. ಮನೆ ನಂ. 96 ಪ್ರತಿವಾದಿಯರ ಅನಾದಿಕಾಲದ ಮನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಂಬಂಧಿಸಿದ ಎರಡೂ ಮನೆ ಒಂದೇ ಸಾರಿ ಕಟ್ಟಿಸಿರುತ್ತಾರೆ. ಸದರಿ ಮನೆಗಳನ್ನು ಹೊರತುಪಡಿಸಿ ಪ್ರತಿವಾದಿಯರಿಗೆ ಮನೆ ಇರುವುದಿಲ್ಲವೆಂದರೆ ಸಾಕಷ್ಟು ಜಾಗೆ ಇದೆ ಎಂದು ಹೇಳುತ್ತಾರೆ.

ಪ್ರತಿವಾದಿಯರ ಮನೆ ಬೇರೆ ಕಡೆ ಇತ್ತು ಎಂದು ತೋರಿಸಲು ಭಾವಚಿತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಪ್ರತಿವಾದಿಯರ ಮನೆಗಳ ಚೆಕಬಂಧಿ ಹೇಳಲು ಬರುವುದಿಲ್ಲ, ಏಕೆಂದರೆ ನನಗೆ ಓದು ಬರಹ ಅಷ್ಟೊಂದು ಗೊತ್ತಿಲ್ಲ. ಪ್ರತಿವಾದಿಯರ ಮನೆ ಸುತ್ತಮುತ್ತಲೂ ಸಾಕಷ್ಟು ಮನೆಗಳಿವೆ ಎಂದರೆ ಸರಿ. ಸುತ್ತಮುತ್ತಲಿನ ವಾಸ್ತವ್ಯದವರ ಸಾಕ್ಷಿ ಮಾಡಿಸುವುದಿಲ್ಲ. ಸಾಕ್ಷಿ ನಾನು ಹಾಜರುಪಡಿಸಿದ ದಾಖಲೆಗಳೇ ನನ್ನ ಪರ ಸಾಕ್ಷಿ ಎಂದು ಹೇಳುತ್ತಾರೆ.

ಪ್ರತಿವಾದಿಯರು ಮೂಲತಃ ರೈತಾಬಿ ಹಾಗೂ ದನಗಳನ್ನು ಸಾಕುವುದು ಎಂದರೆ ಇತ್ತೀಚೆಗೆ ಮಾಡಿದ್ದಾರೆ, ಮೊದಲು ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯರ ವಾಸ್ತವ್ಯದ ಮನೆಯಲ್ಲಿ ಏನೇನಿದೆ ಎಂದು ಈ ಬರೆಸಲು ತೊಂದರೆ ಇರಲಿಲ್ಲ ಎಂದರೆ ಅವುಗಳನ್ನು ಇತ್ತೀಚೆಗೆ ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ಪ್ರತಿವಾದಿಯರು ಮನೆಗಳು ಮೊದಲಿನಿಂದಲೂ ಇರುತ್ತವೆ ಎಂದರೆ ಸಾಕ್ಷಿ ಅಂದಾಜು 10 ವರ್ಷಗಳಿಂದ ಇರಬಹುದು ಎಂದು ಹೇಳುತ್ತಾರೆ. ಪ್ರತಿವಾದಿಯರ ಮನೆ ಮೊದಲಿನಿಂದಲೂ ಇದ್ದರೂ ಸಹ 10 ವರ್ಷದ ಈಚೆಗೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ  ಎರಡೂ ಮನೆ ಹಂಚಿನ ಮನೆ ಇರುತ್ತವೆ ಎಂದರೆ ಸರಿ.

ಪ್ರತಿವಾದಿಯರಿಗೆ ಸಂಬಂಧಿಸಿದ ಮನೆಗಳಿಗೆ ನಾನು ಯಾವತ್ತೂ ತೆರಿಗೆ ನೀಡಿಲ್ಲ. ನನಗೆ ಹಾಗೂ ಪ್ರತಿವಾದಿಯರ ಕುಟುಂಬಕ್ಕೆ ಭೂ ನ್ಯಾಯ ಮಂಡಳಿಯಿಂದ ಜಮೀನು ಮಂಜೂರಿಯಾಗಿವೆ ಎಂದರೆ ಪ್ರತ್ ಪ್ರತ್ಯೇಕವಾಗಿ ಆಗಿವೆ ಎಂದು ಹೇಳುತ್ತಾರೆ. ಕಬ್ಜಾ

ಸಾಗುವಳಿ ಅನುಸರಿಸಿ ಜಮೀನು ಮಂಜೂರಿ ಮಾಡಿರುತ್ತಾರೆಂದರೆ ಸರಿ. ಪ್ರತಿವಾದಿಯರ ಮನೆ ತೆಗೆಸಿ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಗೆ ಹೋಗಲು ಇರುವ ರಸ್ತೆ ಮುಖಾಂತರ ರಿಕ್ಷಾ ಓಡಾಡುವಷ್ಟು ಅಗಲದ ರಸ್ತೆ ಬೇಕೆಂದು ಮಾಡಿದ ವಿನಂತಿ ತಿರಸ್ಕರಿಸಿದ್ದರಿಂದ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡಲು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು 50 ವರ್ಷಗಳಿಂದಲೂ ಮನೆ ಕಟ್ಟಿಕೊಂಡು ವಾಸ್ತವ್ಯ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಅವರಿಗೆ ಸಂಬಂಧಿಸಿದ ಮನೆ ಬೇರೆ ಕಡೆ ಇದೆ ಎಂದು ಹೇಳುತ್ತಾರೆ. ಅಂದಾಜು 20 ವರ್ಷಗಳಿಂದ ನಮ್ಮ ಹಾಗೂ ಪ್ರತಿವಾದಿಯರ ನಡುವೆ ಮಾತಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.